# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : **1088(1151)** |
| **ಸದಸ್ಯರ ಹೆಸರು** | : **ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಯಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : **27.08.2026** |
| **ಉತ್ತರಿಸಬೇಕಾದ ಸಚಿವರು** | : **ಮಾನ್ಯ ನಗರಾಭಿವೃದ್ಧಿ ಸಚಿವರು** |

| **ಕ್ರ. ಸಂ** | **ಪ್ರಶ್ನೆ** | **ಉತ್ತರ** |
|---|---|---|
| (ಅ) | ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿ ಮತ್ತು ವಿಜಯನಗರ ಜಿಲ್ಲೆಯ ಹೊಸಪೇಟೆ ನಗರಸಭೆಯ ವ್ಯಾಪ್ತಿಯಲ್ಲಿ ರಾಜ ಕಾಲುವೆ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ರಾಜ ಕಾಲುವೆ ಒತ್ತುವರಿಯಾದಲ್ಲಿ ಒಟ್ಟು ಒತ್ತುವರಿಯಾದ ವಿಸ್ತೀರ್ಣ ಎಷ್ಟು; | **ಬಳ್ಳಾರಿ ಮಹಾನಗರ ಪಾಲಿಕೆ:**<br>ಬಳ್ಳಾರಿ ನಗರದಲ್ಲಿ ಅಂದಾಜು 0.042 ಚ.ಕಿ.ಮೀ. ರಷ್ಟು ರಾಜಕಾಲುವೆಗಳ ಒತ್ತುವರಿಯಾಗಿರುತ್ತದೆ.<br><br>**ವಿಜಯನಗರ ಜಿಲ್ಲೆಯ ಹೊಸಪೇಟೆ ನಗರಸಭೆ:**<br>ತಹಶೀಲ್ದಾರ್ ಹಾಗೂ Assistant Director of Land Records (ADLR) ರವರಿಗೆ ಪತ್ರ ಬರೆದು, ಒತ್ತುವರಿಯಾಗಿರುವ ವಿಸ್ತೀರ್ಣದ ಕುರಿತು ಸರ್ವೆ ಮಾಡಿಸಿ, ಒತ್ತುವರಿಯಾಗಿರುವ ವಿಸ್ತೀರ್ಣದ ನಿಖರ ಅಳತೆಗಳನ್ನು ಗುರುತಿಸಿ ವರದಿ ಪಡೆಯಲಾಗುವುದು. |
| (ಇ) | ರಾಜ ಕಾಲುವೆ ಒತ್ತುವರಿಯಾಗಿದ್ದಲ್ಲಿ ಒತ್ತುವರಿಯಾದ ಜಾಗ ತೆರವುಗೊಳಿಸಲು ಸರ್ಕಾರದಿಂದ ಯಾವ ಕಾಲಮಿತಿಯಲ್ಲಿ ಕ್ರಮ ಜರುಗಿಸಲಾಗುವುದು; | **ಬಳ್ಳಾರಿ ಮಹಾನಗರ ಪಾಲಿಕೆ:**<br>ಬಳ್ಳಾರಿ ನಗರದ ಹಳೆ ಪ್ರದೇಶಗಳಲ್ಲಿನ ರಾಜ ಕಾಲುವೆಗಳ ಕೆಲ ಭಾಗಗಳು ಒತ್ತುವರಿಯಾಗಿ ಮನೆಗಳು ನಿರ್ಮಾಣವಾಗಿದ್ದು, ಇವುಗಳ ಪೈಕಿ ಕೆಲವೊಂದು ಪ್ರದೇಶಗಳು ಅಧಿಕೃತ ಕೊಳಚೆ ಪ್ರದೇಶವೆಂದು ಘೋಷಣೆಯಾಗಿರುತ್ತದೆ. ಒತ್ತುವರಿಯಾದ ರಾಜಕಾಲುವೆಗಳನ್ನು ಸರ್ವೆ ಇಲಾಖೆಯಿಂದ ಹದ್ದುಬಸ್ತು ಗುರುತಿಸಿ ವರದಿ ಪಡೆದು ಆಧ್ಯತೆ ಮೇರೆಗೆ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.<br><br>**ವಿಜಯನಗರ ಜಿಲ್ಲೆಯ ಹೊಸಪೇಟೆ ನಗರಸಭೆ:**<br>ತಹಶೀಲ್ದಾರ್ ಹಾಗೂ Assistant Director of Land Records (ADRL) ರವರಿಗೆ ಪತ್ರ ಬರೆದು, ಒತ್ತುವರಿಯಾಗಿರುವ ವಿಸ್ತೀರ್ಣದ ಕುರಿತು ಸರ್ವೆ ವರದಿ ಪಡೆದು ಒತ್ತುವರಿಯನ್ನು 03 ತಿಂಗಳೊಳಗಾಗಿ ತೆರವುಗೊಳಿಸಲು ಕ್ರಮ ವಹಿಸಲಾಗುವುದು. |

| | | |
|---|---|---|
| (ಈ) | ರಾಜ ಕಾಲುವೆ ಒತ್ತುವರಿಯಲ್ಲಿ ತೆರವುಗೊಳಿಸಿದ ಒಟ್ಟು ಒತ್ತುವರಿಯಾದ ವಿಸ್ತೀರ್ಣ ಎಷ್ಟು; (ವಿವರಗಳೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು) | **ಬಳ್ಳಾರಿ ಮಹಾನಗರ ಪಾಲಿಕೆ:**<br>ಬಳ್ಳಾರಿ ನಗರದ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ರಾಜ ಕಾಲುವೆಗಳ ಪೈಕಿ ಕೆ.ಸಿ. ರಸ್ತೆ ವಡ್ಡರ ಬಂಡೆಯಿಂದ ಬೋಯಿಗೇರಿ ಸರ್ಕಲ್‌ವರೆಗೆ, ಬೋಯಿಗೇರಿ ಸರ್ಕಲ್ ನಿಂದ ಬಾಂಬೆ ಫ್ರೆಸ್ ರೋಡ್‌ವರೆಗೆ, ರೂಪನಗುಡಿ ರಸ್ತೆ ಹನುಮಾನ್ ನಗರ ಕ್ರಾಸ್‌ನಿಂದ ನೈರಾ ಪೆಟ್ರೋಲ್ ಪಂಪ್ ವರೆಗೆ, ಸಿದ್ಧಾರ್ಥ ನಗರ ಪೋಲಾ ಹೋಟೆಲ್ ಹತ್ತಿರ ಒಟ್ಟು 0.0089 ಚ.ಕಿ.ಮೀ. ರಷ್ಟು ರಾಜಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ. |

ನಅಇ 54 ಎಬಿಸಿ 2026 (ಇ)

(ಸಹಿ)

**(ಡಾ. ಯತೀಂದ್ರ ಸಿದ್ದರಾಮಯ್ಯ)**
**ನಗರಾಭಿವೃದ್ಧಿ ಸಚಿವರು**